ಕೋಟ್ಯಂತರ ವರ್ಷಗಳಿಂದ ಜೀವದ ಕೊಂಡಿ ಮುರಿಯದೆ ಅನಂತದತ್ತ ಮುಂದುವರಿಯುತ್ತಲೇ ಇರುವುದು? ಅದರಿಂದಲೇ ಅಲ್ಲವೆ ಎಂದೋ ಪ್ರಾರಂಭವಾದ ಸರಳ ಜೀವ ಇಷ್ಟು ವೈವಿಧ್ಯದಿಂದ ವಿಕಾಸಗೊಂಡಿರುವುದು?'

ವೀಣಾ ಹೇಳಿದ್ದರಲ್ಲಿ ಸತ್ಯವಿತ್ತು.

ಜೀವಿಗಳ ಅನಂತತೆಗೆ ಪುನರಾಭಿವೃದ್ಧಿಯೇ ಪ್ರಮುಖ ಕೊಂಡಿ. ಪುನರಾಭಿವೃದ್ಧಿಯಲ್ಲಿ ತೊಡಗಿಕೊಳ್ಳದ ಅಥವ ಅದರಲ್ಲಿ ಸೋತ ಜೀವಿಗಳು ಎಂದೂ ಉಳಿಯವು. ಅಂತಹ ಪ್ರಭೇದಗಳು ತಮ್ಮ ವಂಶವನ್ನು ಮುಂದುವರಿಸಲಾಗದೆ ಕಾಲಗರ್ಭದಲ್ಲಿ ಅಂತ್ಯಗೊಳ್ಳುತ್ತವೆ. ಪುನರಾಭಿವೃದ್ಧಿಯ ಕ್ರಿಯೆಯು ಜೀವದ ನದಿಯನ್ನು ಸದಾ ಜೀವಂತವಾಗಿ ಹರಿಯುವಂತೆ ಉಳಿಸುವ ಪ್ರಮುಖ ಶಕ್ತಿ.

ಆದರೆ, ಜೀವಿಗಳು ಬದುಕಿದ್ದರೆ ಮಾತ್ರವೇ ಪುನರಾಭಿವೃದ್ಧಿಯಲ್ಲಿ ತೊಡಗಿಕೊಳ್ಳಲು ಸಾಧ್ಯ. ಪುನರಾಭಿವೃದ್ಧಿಯಲ್ಲಿ ತೊಡಗುವ ಮುನ್ನವೇ ಸತ್ತುಹೋದ ಜೀವಿಗಳು ತಮ್ಮ ವಂಶವನ್ನು ಮುಂದುವರಿಸಲಾಗದೆ ಅಳಿದುಹೋಗುತ್ತವೆ. ಅಂತಹ ಜೀವಿಗಳು, ಅಂದರೆ ಬದುಕಲು ಸೋತ ಜೀವಿಗಳು, ಪುನರಾಭಿವೃದ್ಧಿ ಮಾಡಲಾಗದೆ ವಿಕಾಸದ ಹಾದಿಯಲ್ಲಿ ಮರೆಯಾಗಿಹೋಗುತ್ತವೆ. ಹಾಗಾಗಿ ಪುನರಾಭಿವೃದ್ಧಿ ಮಾಡುವವರೆಗೂ ಬದುಕಿರುವುದು ಜೀವದ ಅನಂತತೆಗೆ, ಪುನರಾಭಿವೃದ್ಧಿಯಷ್ಟೇ ಅವಶ್ಯಕ. ಆದಕಾರಣ ಎಲ್ಲ ಜೀವಿಗಳಲ್ಲೂ ಕನಿಷ್ಠ, ಪುನರಾಭಿವೃದ್ಧಿ ಆಗುವವರೆಗಾದರೂ ಬದುಕಲು ಹೆಣಗುವ ಗುಣ ವಿಕಾಸಗೊಂಡಿರಲೇಬೇಕು. ಈ ಕಾರಣದಿಂದಲೇ ಸಾಯುವ ಗುಣಕ್ಕಿಂತ ಬದುಕುವ ಛಲ ಜೀವಿಗಳಲ್ಲಿ ಅಂತರ್ಗತವಾಗಿದೆ.

ಇನ್ನು, ಹೆಚ್ಚು ಕಾಲ ಬದುಕುವ ಜೀವಿಗಳು ಹೆಚ್ಚು ಕಾಲದವರೆಗೆ ಪುನರಾಭಿವೃದ್ಧಿಯಲ್ಲಿ ತೊಡಗಿಕೊಳ್ಳುವುದರಿಂದ, ಅಂತಹ ಜೀವಿಗಳ ವಂಶವು, ಕಡಿಮೆ ಕಾಲ ಬದುಕುವ ಜೀವಿಗಳ ವಂಶಕ್ಕಿಂತ ಹೆಚ್ಚು ವೃದ್ಧಿಯಾಗುತ್ತದೆ. ಇದರಿಂದಾಗಿ, ಕಾಲಕ್ರಮೇಣ ಹೆಚ್ಚು ಕಾಲದವರೆಗೆ ಬದುಕಲು ಹೆಣಗುವ ಗುಣ ಎಲ್ಲ ಜೀವಿಗಳಲ್ಲಿ ಅಂತರ್ಗತವಾಗುವುದನ್ನು ನಿರೀಕ್ಷಿಸಬಹುದು.

ಬದುಕಬೇಕು ಎಂಬ ಆಸೆ, ಬದುಕುವ ಸಲುವಾಗಿ ಏನನ್ನೇ ಆಗಲಿ ತ್ಯಾಗ ಮಾಡುವ ಗುಣ, ಎಂತಹ ದುಃಸ್ಥಿತಿಯಲ್ಲಿಯೂ ಬದುಕಲು ಹೆಣಗಾಡಿ, ಜೀವ ಉಳಿಸಿಕೊಳ್ಳುವ ಛಲ, ಜೀವಿಗಳಲ್ಲಿ ಅಂತರ್ಗತವಾಗದಿದ್ದರೆ, ಸಣ್ಣ ಸಣ್ಣ ಸಂಕಷ್ಟಗಳ ಸ್ಥಿತಿಯಲ್ಲೂ ಬದುಕಲು ಹೋರಾಡದೆ, ಚಿಕ್ಕ ಪುಟ್ಟ ತೊಂದರೆಗಳು ಎದುರಾದಾಗಲೆಲ್ಲ ಅವಕ್ಕೆ ಮಣಿದು, ಸಾವಿಗೆ ಬಲಿಯಾಗಿ, ಜೀವಿಗಳು ಪುನರಾಭಿವೃದ್ಧಿ ಮಾಡದೆಯೇ ಅಳಿದುಹೋಗುತ್ತಿದ್ದವು. ಪರಿಣಾಮವಾಗಿ ಎಲ್ಲ ಜೀವಿಗಳು ಎಂದೋ ಮಾಯವಾಗುತ್ತಿದ್ದವು. 'ಬದುಕಬೇಕು' ಎಂಬ ಛಲ ವಿಕಾಸಕ್ರಿಯೆಗೆ ಹಾಗೂ ಜೀವದ ಅನಂತಯಾತ್ರೆಗೆ ಬೇಕಾದ ಮುಖ್ಯ ಇಂಧನ. ಈ ಹಟದ ಗುಣ ವಿಕಾಸದ ಆದಿಯಲ್ಲಿಯೇ ಜೀವಿಗಳಲ್ಲಿ ಅಂತರ್ಗತ ಆಗಿಹೋಗಿದೆ. ಇಲ್ಲದಿದ್ದಲ್ಲಿ ಜೀವದ ಉಗಮದ ಮರುಕ್ಷಣವೇ ಆ ಜೀವ ಹೋರಾಡದೆ ಸತ್ತುಹೋಗಿ, ವಿಕಾಸ ಕ್ರಿಯೆಯೇ ನಿಂತುಹೋಗುತ್ತಿತ್ತು.



ವೈರಸ್ ಆಗಲಿ, ಬ್ಯಾಕ್ಟೀರಿಯ ಆಗಲಿ, ಬ್ರೆಡ್ ಮೇಲೆ ಬೆಳೆಯುವ ಶಿಲೀಂಧ್ರವಾಗಲಿ, ಸಸ್ಯಗಳಾಗಲಿ, ಪ್ರಾಣಿಗಳಾಗಲಿ, ಎಲ್ಲ ಜೀವಿಗಳಲ್ಲೂ ಬದುಕಬೇಕೆಂಬ ಛಲವು ಅವುಗಳ ನಿರ್ಭೇದ್ಯ ಗುಣವಾಗಿ ಉಳಿದುಕೊಂಡಿದೆ. ಬದುಕುವ ಅಂತಃಶಕ್ತಿ ಇಲ್ಲದಿದ್ದಲ್ಲಿ, ಇಡೀ ಮಾನವ ಕುಲವನ್ನೇ ತನ್ನ ಪಾದದಡಿಯಲ್ಲಿ ತುಳಿಯುತ್ತಿರುವ ಕೊರೊನಾವೂ ಉಳಿಯುತ್ತಿರಲಿಲ್ಲ. ಆ ಕೊರೊನಾವನ್ನು ಮೆಟ್ಟಿ ನಿಂತು ಗೆಲ್ಲಬೇಕು ಎಂಬ ಛಲದಿಂದ ಇಡೀ ಮಾನವ ಕುಲ ಒಂದಾಗಿ ಹೋರಾಡುತ್ತಿರುವುದು ಕೂಡ ನಾವು ಬದುಕಬೇಕು ಎಂಬ ಛಲದಿಂದಲೇ. ವೈರಸ್ ಮತ್ತು ನಮ್ಮ ನಡುವಿನ ಈ ಜಂಜಾಟದ ಅಂತ್ಯದಲ್ಲಿ ಗೆಲ್ಲುವುದು ಮಾನವನೂ ಅಲ್ಲ, ಕೊರೊನಾವೂ ಅಲ್ಲ. ಕೇವಲ 'ಬದುಕಬೇಕು' ಎಂಬ ಅಂತಃಚೇತನ ಅಷ್ಟೆ.

## ಬದುಕು ಬೇಕು; ಸಾವು ಏಕೆ?

'ಪುನರಾಭಿವೃದ್ಧಿಗಾಗಿ ಮಾತ್ರವೇ ನಾವೆಲ್ಲ ಬದುಕಿರುವುದು' ಎಂಬ ವಾದ ಸತ್ಯವಾದರೆ ಆ ಕಾರ್ಯ ಮುಗಿಯುತ್ತಿದ್ದಂತೆಯೇ ನಮ್ಮ ಅವಶ್ಯಕತೆ ಅಥವ ನಾವು ಬದುಕಬೇಕಾದ ಅವಶ್ಯಕತೆ ಇಲ್ಲವಾಗುತ್ತದೆ. ಇದು ಸತ್ಯವೆ? ಸತ್ಯವಾಗಿದ್ದಲ್ಲಿ ಪುನರಾಭಿವೃದ್ಧಿಯ ಜವಾಬ್ದಾರಿ ಮುಗಿಯುತ್ತಿದ್ದಂತೆ ಜೀವಿಗಳು ಸಾಯಲು ಸಿದ್ಧವಿರಬೇಕು. ಕಾರಣ ಅವು ಏನೂ ಮಾಡದೆ ಬದುಕುವುದು ವ್ಯರ್ಥವಷ್ಟೇ ಅಲ್ಲದೆ, ಮುಂದಿನ ತಲೆಮಾರಿನ ಉಳಿವಿಗೆ, ಬೆಳವಣಿಗೆಗೆ ಅಡ್ಡಿಯಾಗುತ್ತವೆ ಕೂಡ. ತಮ್ಮದೇ ವಂಶೋದ್ಧಾರದ ಕಾರ್ಯದಲ್ಲಿ

